O.S. NO.103–2018

PW –1 .

Dated: 10–11–2023.

<u>ಮಧ್ಯಂತರ ಅರ್ಜಿ ನಂ. 15 ಮತ್ತು 16 ರ ಮೇರೆಗೆ ಸಾಕ್ಷಿಯನ್ನು ಕರೆಯಿಸಿ ಶಪತವನ್ನು ಬೋಧಿಸಿದೆ.</u>

<u>ಪಾಟೀ ಸವಾಲುಃ 11 ನೇ ಪ್ರತಿವಾದಿ ಪರವಾಗಿ ಶ್ರೀ ಬಿ.ಬಿ.ಎಚ ವಕೀಲರಿಂದ</u>

ಬಾಳಪ್ಪ ಶಿವಪೂಜಿ ನಮ್ಮ ಕಾಕಾ .ಬಾಳಪ್ಪ ಶಿವಪೂಜಿ ನಮ್ಮ ಅಜ್ಜ ಎಂದರೆ ಸರಿ . ವಾದಿ ಪ್ರತಿವಾದಿಯರು ಬಹಳ ವರ್ಷದಗಳ ಹಿಂದೇಯೇ ಪ್ರತ್ಯೇಕವಾಗಿರವ ಕಾರಣ ಪರಸ್ಪರ ಸಂಬಂಧಿಗಳು ನಮಗೆ ಗೊತ್ತಿಲ್ಲ ಎಂದರೆ ಸರಿ . ಪ್ರತಿವಾದಿ ನಂ. 1 ರಿಂದ 4 ನನಗೆ 2 ನೇ ಅಣ್ಣ ತಮ್ಮಂದಿರು ಆಗಬೇಕು . ನಮ್ಮದು ಮತ್ತು ಅವರದು ಬೇರೆ ಬೇರೆ ವಂಶಾವಳಿ . ನನಗೆ ವಂಶಾವಳಿ ಸರಿಯಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ . ನಾನು 1981 ರಲ್ಲಿ ಜನಿಸಿದ್ದೇನೆ . ವಾದಿ ನಂ. 6 ನನ್ನ ತಂದೆ ಎಂದರೆ ಸರಿ. 1 ನೇ ವಾದಿ, ವಾದಿ ನಂ. 6 ಮತ್ತು ಪ್ರತಿವಾದಿ ನಂ. 1 ರಿಂದ 4 1984 ರಲ್ಲಿ ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿ . 1984 ರಲ್ಲಿ ಕೇವಲ ಮೂರು ವರ್ಷ ಇದ್ದ ಕಾರಣ ವಾಟ್ನಿ ಆದ ವಿಷಯ ಗೊತ್ತಿಲ್ಲ ಎಂದರೆ ಸರಿಯಲ್ಲ. 1984 ರಲ್ಲಿ ವಾಟ್ನಿ ಆದ ಕೂಡ ಉತಾರಗಳು ಕೂಡ ಪ್ರತ್ಯೇಕವಾಗಿದೆ ಎಂದರೆ ಗೊತ್ತಿಲ್ಲ. ನಮ್ಮ ಹಿರಿಯರು ವಾಟ್ನಿ ಪ್ರಕಾರ ಪ್ರತ್ಯೇಕ ಕಬ್ಜಾ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ನಮ್ಮ ಪಾಲಿನ ಆಸ್ತಿಗಳನ್ನು ಪ್ರತ್ಯೇಕವಾಗಿ ಅನುಭವಿಸಿಕೊಂಡು ಬಂದಿರುತ್ತಾತೆ ಪ್ರತ್ಯೇಕ ಕರ ಕೂಡ ಪಾವತಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಮ್ಮ ತಂದೆ ಯಾವ ಜಮೀನಿಗೆ ಕರ ತುಂಬುತ್ತಾರೆ ಎಂದು ನನಗೆ ಮಾಹಿತಿ ಇಲ್ಲ ಅದರ ಬಗ್ಗೆ ನಾನು ವಿಚಾರಣೆ

O.S. NO.103-2018

PW -1 .

Dated: 10-11-2023.

ಮಾಡಿಲ್ಲ . 1984 ರಲ್ಲಿ ಭೀಮಪ್ಪ ಮತ್ತು ರುದ್ರಪ್ಪ ಅಣ್ಣತಮ್ಮಂದರು ವಾಟ್ನಿ ಆದ ನಂತರ ಪ್ರತ್ಯೇಕ ಹಫ್ತಾ ತುಂಬುತ್ತಿದ್ದಾರೆ ಎಂದರೆ ಸಿದ್ದಗೀರಿ ಕುಟುಂಬದವರು ಹಫ್ತಾ ತುಂಬುತ್ತಿದ್ದರು ಎಂದರೆ ಗೊತ್ತಿಲ್ಲ. ಕರ ಪಾವತಿ ರಸೀದಿಗಳು ನನ್ನ ಕಡೆ ಇಲ್ಲಾ ಎಂದರೆ ಗೊತ್ತಿಲ್ಲ. 2016 ರಲ್ಲಿ ಸತ್ಯಮ ಹೂಗಾರ ಎನ್ನುವವರು ದಾವಾದ ಆಸ್ತಿ ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನಾನು ದಾವಾದ ಆಸ್ತಿಯ ಕಬ್ಜಾ ಇರುವ ಬಗ್ಗೆ ಬೇರೆಯವರ ಸಾಕ್ಷಿ ಮಾಡಿಸಿಲ್ಲ . ಸಾಕ್ಷಿ ಮಾಡಿಸಲು ತೊಂದರೆ ಇದೆ. ನಾನು ದಾವಾದ ಆಸ್ತಿಯ ಕಬ್ಜಾದಲ್ಲಿ ಇಲ್ಲ ಹೀಗಾಗಿ ಸಾಕ್ಷಿ ಮಾಡಿಸುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮಾಡಿಸುತ್ತೇನೆ. ನಾನು ದಾವಾದ ಆಸ್ತಿ ಕಬ್ಜಾ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕೀಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.

GRL